**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ43/2022 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **07.07.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ **ಎಂ.ಎಚ್.ಎಸ್** ವಕೀಲರವರಿಂದಃ

ನಾನು ದಿನಾಂಕ **04.02.1999** ರ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**51** ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 3** ಮತ್ತು **4** ನೇ ಪ್ರತಿವಾದಿಗಳ ಪರ ಶ್ರೀ **ಎ.ಪಿ.ಎಸ್** ವಕೀಲರಿಂದಃ

ನನ್ನ ಗಂಡ ದಾವಾ ಆಸ್ತಿಯನ್ನು ದಿನಾಂಕ **04.02.1999** ರಂದು ರಾಜೇಂದ್ರಪ್ಪ ಬಿನ್ ಲೇಟ್ ಚನ್ನಬಸಪ್ಪ ಹಾಗೂ ಅವರ ಮಗ ಕುಮಾರಸ್ವಾಮಿರವರಿಂದ ಖರೀದಿ ಮಾಡಿರುತ್ತಾರೆ ಎಂದು ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ರಾಜೇಂದ್ರಪ್ಪರವರು ದಾವಾ ಆಸ್ತಿಯನ್ನು ದಿನಾಂಕ **17.10.1977** ರಂದು ಶಿವಪ್ಪರವರ ಮಗಳಾದ ಗೌರಮ್ಮರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಖರೀದಿ ಮಾಡಿದ ದಾವಾ ಆಸ್ತಿಯ ಚೆಕ್ಕುಬಂಧಿ ಹಾಗೂ ರಾಜೇಂದ್ರಪ್ಪರವರು ಖರೀದಿ ಮಾಡಿದ ಆಸ್ತಿಯ ಚೆಕ್ಕುಬಂಧಿ ಒಂದೇ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಎರಡು ಕ್ರಯಪತ್ರಗಳನ್ನು ಹಾಗೂ ಅದರ ಚೆಕ್ಕುಬಂಧಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ರಾಜೇಂದ್ರಪ್ಪರವರು ದಿನಾಂಕ **17.10.1977** ರಲ್ಲಿ ಖರೀದಿ ಮಾಡಿದ ಆಸ್ತಿಯನ್ನು ಅಕ್ರಮವಾಗಿ ಕಂದಾಯ ಜಮೀನು ಎಂದು ಜಿಲ್ಲಾಧಿಕಾರಿಯವರಿಂದ (restore) ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ನಿಪಿ-**31** ಮತ್ತು ನಿಪಿ-**32** ದಾಖಲೆಗಳು ದಾವಾ ಆಸ್ತಿಗೆ ಸಂಬಂಧಿಸಿರುವುದಿಲ್ಲ ಹಾಗೂ ಅವುಗಳು ಗ್ರಾಮ ಠಾಣಾ ವ್ಯಾಪ್ತಿಯ ಹಿತ್ತಲು ಮನೆ ಹಾಗೂ ಖಾಲಿ ಜಾಗಕ್ಕೆ ಸಂಬಂಧಿಸಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ

ನಾನು ಯಾವುದೇ ಕಾಲದಲ್ಲೂ ಕಂದಾಯವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳಿಗೆ ಸೇರಿದಂತಹ ಮನೆ, ಹಿತ್ತಲು ಹಾಗೂ ಖಾಲಿ ಜಾಗ ಎಲ್ಲಾ ಆಸ್ತಿಗಳು ದಾವಾ ಆಸ್ತಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳಿಗೆ ಸೇರಿದಂತಹ ಮನೆ, ಹಿತ್ತಲು ಹಾಗೂ ಖಾಲಿ ಜಾಗ ಎಲ್ಲಾ ಆಸ್ತಿಗಳು ಬಂಡಿ ಬೀದಿಯಲ್ಲಿ ಇರುತ್ತವೆ ಎಂದರೆ ಸರಿ, ಸಾಕ್ಷಿ ಮುಂದುವರಿದು ದಾವಾ ಆಸ್ತಿಯು ಸರ್ವೇ ನಂಬರ ಜಮೀನು ಆಗಿರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಕಂದಾಯ ದಾಖಲೆಗಳಲ್ಲಿ ಬದಲಾವಣೆ ಆಗಿರುವುದಿಲ್ಲ, ನಾನು ಅದನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯಲ್ಲಿದ್ದು, ಅದರ ದಾಖಲೆಗಳು ಕೊತ್ತೆಗಾಲ ಗ್ರಾಮ ಪಂಚಾಯತಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಬೀಳು ಬಿಟ್ಟಿದ್ದ ಕಾರಣ ಅಲ್ಲಿ ಯಾವುದೇ ವ್ಯವಸಾಯದ ಚಟುವಟಿಕೆಗಳು ನಡೆದಿರುವುದಿಲ್ಲ ಹಾಗೂ ಅದು ಗ್ರಾಮ ಠಾಣಾ ವ್ಯಾಪ್ತಿಗೆ ಸೇರಿತ್ತು ಎಂದರೆ ಸರಿಯಲ್ಲ. ನಿಪಿ-51 ಕ್ರಯಪತ್ರ ಹಾಗೂ ನನ್ನ ಗಂಡನಿಗೆ ಮಾರಾಟ ಮಾಡಿದ ರಾಜೇಂದ್ರಪ್ಪರವರ ಕ್ರಯಪತ್ರದಲ್ಲಿ ದಾವಾ ಸರ್ವೇ ನಂ.193/8 ರ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.193 ಮಾರಶಟ್ಟಿ, ಕೃಷ್ಣಶೆಟ್ಟಿ ಮತ್ತು ನಂಜಶೆಟ್ಟಿರವರಿಗೆ ಸೇರಿರುವ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ಈ ನಡುವೆ ಸದರಿ ಸರ್ವೇ ನಂಬರ ಆಸ್ತಿಯು 12 ಪೋಡುಗಳು ಆಗಿದ್ದು, ಅದರಲ್ಲಿ ನಮ್ಮ ಆಸ್ತಿಯು 193/8 ಆಗಿರುತ್ತದೆ ಎಂದು ನುಡಿಯುತ್ತಾರೆ. ರಾಜೇಂದ್ರಪ್ಪರವರಿಗೆ ಸರ್ವೇ ನಂಬರ ಇರುವ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ರಾಜೇಂದ್ರಪ್ಪರವರಿಗೆ ಸೇರಿದ್ದ ಆಸ್ತಿಯು 193/6 ಆಗಿದ್ದು, ಅದು ಈಗ 193/8 ಆಗಿರುತ್ತದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ5** ಪ್ರತಿವಾದಿ ಪರ ಶ್ರೀ **ಕೆ.ಜಿ.ಪಿ** ವಕೀಲರು 3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲನ್ನಾಗಿ ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ** 1 ಮತ್ತು 2 ನೇ ಪ್ರತಿವಾದಿಗಳು ಏಕಪಕ್ಷೀಯವಾಗಿರುತ್ತಾರೆ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**